

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 19-04-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಪ್ರಸ್ತಾಪಿಸಲಿರುವ ಬದರಿ ಸಹಾಬಿಯ ಹೆಸರು ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್(ರ). ಮಕ್ಕದ ಖುರೈಶಿಗಳ ಬನೂ ಜಮ್‌ಹ್ ಕುಟುಂಬಕ್ಕೆ ಅವರು ಸೇರಿದ್ದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಾನು ಪ್ರವಾದಿ ಎಂದು ವಾದಿಸಿದ ನಂತರದ ಆರಂಭಕಾಲದ ಬಗ್ಗೆ ಹೇಳುತ್ತಾರೆ: ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವರ ಪ್ರವಾದಿತ್ವದ ಆರಂಭದ ಕಾಲದಲ್ಲಿ ತಲ್‌ಹ, ಝುಬೈರ್, ಉಮರ್, ಹಮ್‌ಝ ಮತ್ತು ಉಸ್ಮಾನ್ ಬಿನ್ ಮಝ್‌ಊನ್ ಅನುಯಾಯಿಗಳಾಗಿ ದೊರೆತರು. ಅವರಲ್ಲಿ ಪ್ರತಿಯೊಬ್ಬ ಅವರಿಗೋಸ್ಕರ ಆತ್ಮಸಮರ್ಪಣೆ ಮಾಡುವವರಾಗಿದ್ದರು. ಪ್ರತಿಯೊಬ್ಬ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬೆವರಿಗೆ ಬದಲಾಗಿ ರಕ್ತ ಹರಿಸಲು ಸಿದ್ಧರಿದ್ದರು. ಹದಿಮೂರು ವರ್ಷಗಳ ತನಕ ಬಹಳ ಕಷ್ಟವನ್ನು ಅವರು ಅನುಭವಿಸಬೇಕಾಯಿತು. ಆದರೆ ಮಕ್ಕದ ಜನರ ಪೈಕಿ ಬುದ್ಧಿಶಾಲಿಗಳು, ಗಣ್ಯರು, ತಖ್ವ ಹೊಂದಿದವರು, ಪರಿಶುದ್ಧರಾದವರು ತನ್ನನ್ನು ನಂಬಿರುವರು ಹಾಗೂ ಮುಸ್ಲಿಮರು ಒಂದು ಶಕ್ತಿಶಾಲಿ ಗುಂಪು ಎಂದು ಪರಿಗಣಿಸಲ್ಪಡುತ್ತಾರೆ ಎಂದು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಮಾಧಾನ ಪಟ್ಟಿದ್ದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಯಾರಾದರೂ ನಊದುಬಿಲ್ಲಾಹ್ 'ಹುಚ್ಚ' ಎಂದು ಹೇಳುವಾಗ ಅವರ ಜೊತೆಗಾರರೇ ಹೇಳುತ್ತಿದ್ದರು – ಅವರು ಹುಚ್ಚನಾಗಿದ್ದರೆ ಇಂತಿಂತಹ ಬುದ್ಧಿಶಾಲಿ ಅವರನ್ನು ನಂಬುತ್ತಿದ್ದರೆ ಎಂದು. ಇದು ಎಂತಹ ಉತ್ತರವಾಗಿತ್ತೆಂದರೆ ಅದರ ವಿರುದ್ಧ ಮಾತನಾಡಲು ಯಾರಿಗೂ ಸಾಧ್ಯವಿರಲಿಲ್ಲ.

ಯುರೋಪಿಯನ್ ಲೇಖಕರು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಏನೇನೆಲ್ಲಾ ಬರೆಯುತ್ತಾರೆ. ಆದರೆ ಹಝ್ರತ್ ಅಬೂಬಕರ್(ರ)ರವರ ಹೆಸರು ಬರುವಾಗ ಹೇಳುತ್ತಾರೆ, ಅಬೂಬಕರ್ ನಂಬಿದ ವ್ಯಕ್ತಿ ಸುಳ್ಳುಗಾರನಾಗುವುದಾದರೂ ಹೇಗೆ. ಅಬೂಬಕರ್ ನಂಬಿದ ವ್ಯಕ್ತಿ ನಿಶ್ಚಯವಾಗಿಯೂ ಸ್ತುತ್ಯರ್ಹರಾಗಿದ್ದಾರೆ ಎಂದು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಹೇಳುತ್ತಾರೆ: ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಆರಂಭದಲ್ಲಿಯೇ ನಂಬಿದ್ದರು. ಅನಂತರ ವಿದ್ಯಾವಂತರಾದ ಜನರು ಅವರೊಂದಿಗೆ ಸೇರಿದರು. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಎಂತಹ ಅನುಯಾಯಿಗಳನ್ನು ನೀಡಿದನೆಂದರೆ ಆ ಅನುಯಾಯಿಗಳನ್ನು ಲೋಕದ ಜನರು ಹೊಗಳುತ್ತಿದ್ದರು.

ಮಕ್ಕದ ಜನರ ವ್ಯಾಕುಲತೆ ಮತ್ತು ಮತ್ಸರದ ಬಗ್ಗೆ ವಿವರಿಸುತ್ತಾ ಬೇರೊಂದು ಸ್ಥಳದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನು ಎಂತಹ ಪರಿಸ್ಥಿತಿಗಳನ್ನು ಸೃಷ್ಟಿಸಿದನೆಂದರೆ ಅವಿಶ್ವಾಸಿಗಳ ಹೃದಯ ಪ್ರತಿ ಸಮಯ ಸುಟ್ಟು ಬೂದಿಯಾಗುತ್ತಿತ್ತು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿಯಾಗಿ ಪರಿವರ್ತಿತರಾದ ಜನರಿಲ್ಲದ ಯಾವ ಪ್ರತಿಷ್ಠಿತ ಕುಟುಂಬವೂ ಇರಲಿಲ್ಲ. ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್ ಸಹ ಅಂತಹ ಒಂದು ಪ್ರತಿಷ್ಠಿತ ಕುಟುಂಬದವರಾಗಿದ್ದರು. ಒಟ್ಟಾರೆ ಹೇಳುವುದಾದರೆ ಸಾವಿರಾರು ಜನರು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಠಿಣ ಶತ್ರುಗಳಾಗಿದ್ದರು. ಆದರೆ ಅವರ ಮಕ್ಕಳು ತಮ್ಮನ್ನು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೇವೆಗೆ ಅರ್ಪಿಸಿದರು. ಅವರು ಯುದ್ಧ ಕ್ಷೇತ್ರದಲ್ಲಿ ತಮ್ಮ ತಂದೆ ತಾತಂದಿರ ಮತ್ತು ಸಂಬಂಧಿಕರ ವಿರುದ್ಧ ಹೋರಾಡಿದರು.

ಇಬ್ನು ಇಸ್‌ಹಾಖ್ ಹೇಳುತ್ತಾರೆ: ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್ ಹದಿಮೂರು ಜನರ ನಂತರ ಮುಸ್ಲಿಮರಾದರು. ಅವರು ಮತ್ತು ಅವರ ಪುತ್ರ ಸಾಯಿಬ್ ಮುಸ್ಲಿಮರ ಪ್ರಥಮ ಗುಂಪಿನೊಂದಿಗೆ ಅಬಿಸೀನಿಯಾಕ್ಕೆ ಹಿಜ್‌ರತ್ ಮಾಡಿದ್ದರು. ಖುರೈಶಿಗಳು ಮುಸ್ಲಿಮರಾದರೆಂಬ ಸುಳ್ಳು ವಾರ್ತೆ ಆಲಿಸಿ ಅವರು ಮಕ್ಕಕ್ಕೆ ಮರಳಿ ಬಂದರು. ಮಕ್ಕಕ್ಕೆ ಬಂದಾಗ ಆ ವಾರ್ತೆ ಸುಳ್ಳೆಂದು ತಿಳಿಯಿತು. ಆಗ ಕೆಲವರು ಮರಳಿ ಹೋದರು. ಬೇರೆ ಕೆಲವರು ರಕ್ಷಣೆಯ ಭರವಸೆ ಪಡೆದು ಮಕ್ಕವನ್ನು ಪ್ರವೇಶಿಸಿದರು. ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್(ರ) ವಲೀದ್ ಬಿನ್ ಮುಗ್ಯೆರನ ರಕ್ಷಣೆಯ ಭರವಸೆ ಪಡೆದರು. ಮಕ್ಕವನ್ನು ಪ್ರವೇಶಿಸಿದಾಗ ಅವರಿಗೆ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಅನುಯಾಯಿಗಳು ಬಹಳ ಕಷ್ಟ ಅನುಭವಿಸುವುದಾಗಿ, ಅವರ ವಿರುದ್ಧ ದೌರ್ಜನ್ಯ ನಡೆಯುದಾಗಿ ಕಂಡರು. ಆಗ ಅವರು ವಲೀದನೊಂದಿಗೆ ಹೇಳಿದರು: ನೀವು ನಿಮ್ಮ ರಕ್ಷಣೆಯನ್ನು ಹಿಂತೆಗೆದುಕೊಳ್ಳಿರಿ. ನನಗೆ ಅಲ್ಲಾಹನು ನೀಡುವ ರಕ್ಷಣೆ ಸಾಕು. ಆಗ ವಲೀದ್ ಹೇಳಿದರು: ಓ ನನ್ನ ಸಹೋದರ ಪುತ್ರ, ನಾನು ನಿನಗೆ ನೀಡಿದ ರಕ್ಷಣೆ ಕಾರಣದಿಂದ ನಿನಗೆ ಕಷ್ಟವಾಗಿದೆಯೇ? ಅಥವಾ ನಿನ್ನ ಗೌರವಕ್ಕೆ ಏನಾದರೂ ಹಾನಿ ಆಗಿದೆಯೇ? ಹಝ್ರತ್ ಉಸ್ಮಾನ್ ಹೇಳಿದರು: ಇಲ್ಲ, ನನಗೆ ಹಾನಿ ಆಗಿಲ್ಲ. ಆದರೆ ನನಗೆ ಅಲ್ಲಾಹನ ಸಂರಕ್ಷಣೆ ಸಾಕು. ಆಗ ವಲೀದ್ ಹೇಳಿದರು:

ಹಾಗಾದರೆ ನೀನು ಕಅಬದಲ್ಲಿ ನನ್ನ ಸಂರಕ್ಷಣೆ ಮರಳಿಸಿರುವುದಾಗಿ ಬಹಿರಂಗವಾಗಿ ಪ್ರಕಟಿಸು. ಆಗ ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್ ಕಅಬದ ಸಮೀಪ ಹೋಗಿ ಎಲ್ಲರ ಮುಂದೆ ವಲೀದರ ಸಂರಕ್ಷಣೆ ಮರಳಿಸಿರುವುದಾಗಿ ಪ್ರಕಟಿಸಿದರು.

ಅಬಿಸೀನಿಯಾಕ್ಕೆ ಹಿಜ್‌ರತ್ ಮಾಡಿದ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಮುಸ್ಲಿಮರ ವಿರುದ್ಧ ದೌರ್ಜನ್ಯ ಅತ್ಯಂತ ಹೆಚ್ಚು ಆದಾಗ ಹಾಗೂ ಖುರೈಶರು ನೀಡುತ್ತಿದ್ದ ಹಿಂಸೆ ವರ್ಧಿಸುತ್ತಾ ಇದ್ದಾಗ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಮರೊಡನೆ ಅಬಿಸೀನಿಯಾಕ್ಕೆ ಹಿಜ್‌ರತ್ ಹೋಗಲು ಹೇಳಿದರು. ಅಬಿಸೀನಿಯಾದ ದೊರೆ ನ್ಯಾಯಪಾಲನೆ ಮಾಡುವವರೆಂದೂ ಹೇಳಿದರು. ಹಾಗೆ ನಬವಿ ವರ್ಷ 5ನೇ ರಜಬ್ ತಿಂಗಳಲ್ಲಿ ಹನ್ನೊಂದು ಪುರುಷರು ಮತ್ತು ನಾಲ್ಕು ಮಹಿಳೆಯರು ಅಬಿಸೀನಿಯಾಕ್ಕೆ ಹಿಜ್‌ರತ್ ಮಾಡಿದರು. ಒಂದು ವಿಚಿತ್ರ ವಿಷಯವೇನೆಂದರೆ ಈ ಹಿಜ್‌ರತ್ ಮಾಡಿದವರಲ್ಲಿ ಬಹುತೇಕ ಜನರು ಖುರೈಶಿಗಳ ಶಕ್ತಿಶಾಲಿ ಗೋತ್ರಕ್ಕೆ ಸೇರಿದವರಾಗಿದ್ದರು. ಇದರಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ಒಂದನೆಯದು, ಖುರೈಶಿಗಳ ಶಕ್ತಿಶಾಲಿ ಗೋತ್ರದಿಂದ ಬಂದವರು ಸಹ ಖುರೈಶಿಗಳ ದೌರ್ಜನ್ಯಕ್ಕೆ ಪಾತ್ರರಾಗಿದ್ದರು. ಎರಡನೆಯದಾಗಿ, ಬಲಹೀನರಾದ ಜನರು ಮತ್ತು ಗುಲಾಮರು ತಮ್ಮ ನಿಸ್ಸಹಾಯಕತನದ ಕಾರಣ ಹಿಜ್‌ರತ್ ಮಾಡುವ ಶಕ್ತಿ ಸಹ ಹೊಂದಿರಲಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ಘಟನೆಯನ್ನು ತಮ್ಮದೇ ರೀತಿಯಲ್ಲಿ ಹೀಗೆ ಬರೆಯುತ್ತಾರೆ: ಆ ಜನರು ಮಕ್ಕದಿಂದ ವಲಸೆ ಹೋಗಬೇಕಾಗಿ ಬಂದುದು ಅವರಿಗೆ ಬಹಳ ನೋವನ್ನುಂಟುಮಾಡುವ ಘಟನೆಯಾಗಿತ್ತು. ಅವರ ಹೃದಯದ ಸ್ಥಿತಿ ಹಾಗಿತ್ತು. ಅವರನ್ನು ನೋಡಿದವರು ಸಹ ಅವರ ಸ್ಥಿತಿಯಿಂದ ಪ್ರಭಾವಿತರಾಗದಿರಲಿಲ್ಲ. ವಲಸೆ ಹೋಗುವವರಲ್ಲಿ ಕೆಲವರನ್ನು ಹಝ್ರತ್ ಉಮರ್(ರ) ಕಂಡರು. ಆಗ ಅವರು ಅವಿಶ್ವಾಸಿಯಾಗಿದ್ದು ಇಸ್ಲಾಮಿನ ಕಠಿಣ ಶತ್ರುವಾಗಿದ್ದರು. ಹಝ್ರತ್ ಉಮರ್ ಕಂಡ ವಲಸೆಗಾರರಲ್ಲಿ ಒಬ್ಬರು ಉಮ್ಮು ಅಬ್ದುಲ್ಲಾ ಎಂಬ ಸಾಹಾಬಿಯ್ಯ ಆಗಿದ್ದರು. ಕಟ್ಟಿಡಲಾದ ಸಾಮಗ್ರಿಗಳು ಮತ್ತು ಸವಾರಿ ಮೃಗವನ್ನು ಕಂಡಾಗ ಆ ಜನರು ಮಕ್ಕವನ್ನು ಬಿಟ್ಟು ಹೋಗುವುದಾಗಿ ಉಮರ್ ತಿಳಿದುಕೊಂಡರು. ಅವರು ಹೇಳಿದರು: ಓ ಉಮ್ಮು ಅಬ್ದುಲ್ಲಾ, ನೀವು ವಲಸೆ ಹೋಗುವ ಸಿದ್ಧತೆಯಲ್ಲಿರುವ ಹಾಗೆ ಕಾಣುತ್ತದೆ. ಉಮ್ಮು ಅಬ್ದುಲ್ಲಾ ಹೇಳುತ್ತಾರೆ: ನಾನು ಹೌದೆಂದು ಹೇಳಿದೆ. ಅಲ್ಲಾಹನಾಣೆ ನಾವು ಬೇರೆ ಒಂದು ದೇಶಕ್ಕೆ ಹೋಗುತ್ತೇವೆ. ಏಕೆಂದರೆ ನೀವು ನಮಗೆ ಬಹಳ ದುಃಖ ನೀಡಿದಿರಿ. ಬಹಳ ಹಿಂಸೆ ನೀಡಿದಿರಿ. ಅಲ್ಲಾಹನು ನಮಗೆ ಸುಖ ಸೌಕರ್ಯ ಒದಗಿಸುವ ತನಕ ನಾವು ಈ ಊರಿಗೆ ಮರಳಿ ಬರಲಾರೆವು. ಆಗ ಹಝ್ರತ್ ಉಮರ್ ಹೇಳಿದರು: ಒಳ್ಳೆಯದು. ಅಲ್ಲಾಹನು ನಿಮ್ಮ ಜೊತೆಗಿರಲಿ. ಅನಂತರ ಅವರು ಮುಖ ತಿರುಗಿಸಿ ಹೊರಟು ಹೋದರು. ಆಗ ನನಗೆ ಭಾಸವಾಯಿತು ಈ ಘಟನೆ ಹಝ್ರತ್ ಉಮರ್‌ರನ್ನು ಬಹಳ ದುಃಖಕ್ಕೀಡುಮಾಡಿದೆ ಎಂದು.

ಮಕ್ಕದ ಅವಿಶ್ವಾಸಿಗಳಿಗೆ ಮುಸ್ಲಿಮರಲ್ಲಿ ಕೆಲವರು ಅಬಿಸೀನಿಯಾಕ್ಕೆ ವಲಸೆ ಹೋದುದು ತಿಳಿದಾಗ ಅವರು ತಮ್ಮ ಒಂದು ಪ್ರತಿನಿಧಿ ಸಂಘವನ್ನು ಅಬಿಸೀನಿಯಾದ ದೊರೆಯ ಬಳಿಗೆ ಕಳುಹಿಸಿ ಮುಸ್ಲಿಮರ ವಿರುದ್ಧ ದೊರೆಯನ್ನು ಉದ್ರೇಕಿಸಿ ವಲಸೆ ಹೋದ ಮುಸ್ಲಿಮರನ್ನು ಮಕ್ಕದವರ ವಶಕ್ಕೆ ನೀಡುವಂತೆ ಪ್ರೇರೇಪಿಸಲು ನಿರ್ಧರಿಸಿದರು. ಅವಿಶ್ವಾಸಿಗಳ ಪ್ರತಿನಿಧಿ ಸಂಘ ಅಬಿಸೀನಿಯಾಕ್ಕೆ ಹೋಗಿ ದೊರೆಯನ್ನು ಭೇಟಿಯಾದರು. ಅವರು ದೊರೆಯ ಆಸ್ಥಾನಕರನ್ನು ಸಹ ಚೆನ್ನಾಗಿ ಉತ್ತೇಜಿಸಿದರು. ಆದರೆ ಅಲ್ಲಾಹನು ಅಬಿಸೀನಿಯಾದ ದೊರೆಯ ಹೃದಯವನ್ನು ಬಲಪಡಿಸಿದನು. ಅವಿಶ್ವಾಸಿಗಳ ಉತ್ತೇಜನ ಮತ್ತು ಆಸ್ಥಾನಕರ ಒತ್ತಡವನ್ನು ಕಡೆಗಣಿಸಿ, ಮುಸ್ಲಿಮರನ್ನು ಅವಿಶ್ವಾಸಿಗಳ ವಶಕ್ಕೆ ನೀಡಲು ದೊರೆ ನಿರಾಕರಿಸಿದರು. ಹಾಗೆ ಈ ಪ್ರತಿನಿಧಿ ಸಂಘ ತಮ್ಮ ಉದ್ದೇಶ ಸಿದ್ಧಿಯಾಗದೆ ಮರಳಿದರು. ಮಕ್ಕದವರು ಮುಸ್ಲಿಮರನ್ನು ಹಿಂದಕ್ಕೆ ತರಲು ಒಂದು ಹೊಸ ಉಪಾಯ ಮಾಡಿದರು. ಅಬಿಸೀನಿಯಾಕ್ಕೆ ಹೋಗುವ ಇತರ ವ್ಯಾಪಾರಿ ತಂಡಗಳು ಹೀಗೆ ವದಂತಿ ಹರಡಲು ಹೇಳಿದರು: ಮಕ್ಕದ ಜನರೆಲ್ಲರೂ ಮುಸ್ಲಿಮರಾದರೆಂದು. ಈ ವದಂತಿ ಅಬಿಸೀನಿಯಾಕ್ಕೆ ತಲಪಿದಾಗ ಮುಸ್ಲಿಮರಲ್ಲಿ ಹಲವರು ಸಂತೋಷದಿಂದ ಮಕ್ಕಕ್ಕೆ ಮರಳಿದರು. ಆದರೆ ಮಕ್ಕಕ್ಕೆ ತಲಪಿದಾಗ ಈ ವದಂತಿ ಸುಳ್ಳೆಂದು ಅವರಿಗೆ ತಿಳಿಯಿತು. ಆಗ ಕೆಲವರು ಅಬಿಸೀನಿಯಾಕ್ಕೆ ಮರಳಿದರು. ಕೆಲವರು ಮಕ್ಕದಲ್ಲಿಯೇ ನಿಂತರು. ಅವರಲ್ಲಿ ಒಬ್ಬರು ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್(ರ) ಆಗಿದ್ದರು. ಅವರು ಮಕ್ಕದ ಒಬ್ಬ ಐಶ್ವರ್ಯವಂತರ ಪುತ್ರರಾಗಿದ್ದರು. ಅವರ ಪಿತನ ಸ್ನೇಹಿತ ವಲೀದ್ ಬಿನ್ ಮುಗೈರ ಅವರಿಗೆ ಆಶ್ರಯ ನೀಡಿದರು. ಮಕ್ಕದಲ್ಲಿ ಉಸ್ಮಾನ್ ಬಿನ್ ಮಝ್‌ಊನ್ ಶಾಂತಿಯಿಂದ ಜೀವಿಸಿದರು. ಆಗ ಇತರ ಮುಸ್ಲಿಮರಿಗೆ ಬಹಳ ಹಿಂಸೆ ನೀಡಲಾಗುತ್ತಿತ್ತು. ಅವರು ಅಭಿಮಾನಿ ತರುಣನಾಗಿದ್ದ ಕಾರಣ ವಲೀದ್‌ರ ಬಳಿಗೆ ಹೋಗಿ ಹೇಳಿದರು: ನಾನು ತಮ್ಮ ರಕ್ಷಣೆ ಮರಳಿಸುತ್ತೇನೆ. ಇತರ ಮುಸ್ಲಿಮರು ಕಷ್ಟವನ್ನು ಅನುಭವಿಸುವಾಗ ನಾನು ನೆಮ್ಮದಿಯಿಂದಿರಲು ಬಯಸುವುದಿಲ್ಲ. ಆಗ ವಲೀದ್ ಪ್ರಕಟಿಸಿದನು ಉಸ್ಮಾನ್ ನನ್ನ ಸಂರಕ್ಷಣೆಯಲ್ಲಿ ಇಲ್ಲ ಎಂದು.

ಒಂದು ದಿನ ಲಬೀದ್ ಎಂಬ ಒಬ್ಬ ಪ್ರಸಿದ್ಧ ಅರಬಿ ಕವಿ ಮಕ್ಕದ ಗಣ್ಯರ ಸಭೆಯಲ್ಲಿ ತನ್ನ ಪದ್ಯ ಆಲಾಪಿಸುತ್ತಿದ್ದನು. ಅದರ ಒಂದು ಚರಣ ಹೀಗಿತ್ತು. **ಕುಲ್ಲು ನಈಮಿನ್ ಲಾ ಮಹಾಲತ ಝಾಯಿಲುನ್.** ಪ್ರತಿಯೊಂದು ಅನುಗ್ರಹ ಕೊನೆಗೆ ಅಳಿಸಿ ಹೋಗುವುದು. ಉಸ್ಮಾನ್ ಬಿನ್ ಮಝ್‌ಊನ್ ಹೇಳಿದರು: ಈ ಮಾತು ತಪ್ಪಾಗಿದೆ. ಸ್ವರ್ಗದ ಅನುಗ್ರಹಗಳು ಶಾಶ್ವತವಾಗಿರುವುವು. ಲಬೀದ್ ಬಹಳ ಗೌರವಿಸಲ್ಪಡುವ ವ್ಯಕ್ತಿಯಾಗಿದ್ದನು. ಅವನು ಹೇಳಿದನು: ಖುರೈಶಿ ಜನರೇ, ನಿಮ್ಮ ಅತಿಥಿಗಳನ್ನು ಮೊದಲೆಂದೂ ಹೀಗೆ ಅಪಮಾನಿಸಲಾಗುತ್ತಿರಲಿಲ್ಲ. ಈ ಹೊಸ ಆಚಾರ ಯಾವಾಗ ಪ್ರಾರಂಭವಾಯಿತು. ಆಗ ಒಬ್ಬ ಹೇಳಿದ ಒಬ್ಬ ಅವಿವೇಕಿಯ ಮಾತಿಗೆ ಲಕ್ಷ್ಯ ನೀಡಬೇಡಿರಿ. ಆಗ ಹಝ್ರತ್ ಉಸ್ಮಾನ್ ತನ್ನ ಮಾತನ್ನು ಪುನರಾವರ್ತಿಸಿ ಹೇಳಿದರು: ನಾನು ಹೇಳಿದ ಮಾತು ಸತ್ಯವೇ ಆಗಿದೆ. ಆಗ ಒಬ್ಬ ಎದ್ದು ಹಝ್ರತ್ ಉಸ್ಮಾನ್‌ರ

ಮುಖಕ್ಕೆ ಜೋರಾಗಿ ಗುದ್ದಿದನು. ಅದರಿಂದ ಅವರ ಒಂದು ಕಣ್ಣು ಕಿತ್ತು ಹೋಯಿತು. ಆ ಸಭೆಯಲ್ಲಿ ವಲೀದ್ ಇದ್ದನು. ಉಸ್ಮಾನ್ ಬಿನ್ ಮಝ್‌ಊನರ ಪಿತನೊಂದಿಗೆ ವಲೀದ್ ಬಹಳ ನಿಕಟ ಸ್ನೇಹ ಸಂಬಂಧ ಹೊಂದಿದ್ದನು. ತನ್ನ ಮೃತ ಸ್ನೇಹಿತನ ಪುತ್ರನ ಈ ಸ್ಥಿತಿ ಅವನಿಗೆ ನೋಡಲಾಗಲಿಲ್ಲ. ಆದರೆ ಮಕ್ಕದ ಸಂಪ್ರದಾಯದ ಪ್ರಕಾರ ಹಝ್ರತ್ ಉಸ್ಮಾನ್ ವಲೀದನ ಆಶ್ರಯದಲ್ಲಿರದಿದ್ದಾಗ ವಲೀದನಿಗೆ ಅವರಿಗೆ ಸಹಾಯ ಮಾಡಲು ಸಾಧ್ಯವಿರಲಿಲ್ಲ. ಅವನಿಗೆ ಏನೂ ಮಾಡಲು ಸಾಧ್ಯವಾಗಲಿಲ್ಲ. ಅವನು ಹಝ್ರತ್ ಉಸ್ಮಾನರನ್ನು ಸಂಬೋಧಿಸಿ ಹೇಳಿದನು: ಓ ನನ್ನ ಸಹೋದರ ಪುತ್ರ, ಅಲ್ಲಾಹನಾಣೆ, ನೀನು ಒಂದು ಬಲಿಷ್ಠ ಸಂರಕ್ಷಣೆಯಲ್ಲಿರುತ್ತಿದ್ದರೆ ನಿನ್ನ ಕಣ್ಣು ರಕ್ಷಿಸಲ್ಪಡುತ್ತಿತ್ತು. ಆದರೆ ನೀನೇ ನಿನ್ನ ಸಂರಕ್ಷಣೆಯನ್ನು ತ್ಯಜಿಸಿದೆ. ಮತ್ತು ಹೀಗೆ ಸಂಭವಿಸಿತು. ಹಝ್ರತ್ ಉಸ್ಮಾನ್ ಹೇಳಿದರು: ನನಗೆ ಏನು ಸಂಭವಿಸಿತೋ ನಾನೇ ಅದನ್ನು ಇಚ್ಛಿಸುತ್ತಿದ್ದೆ. ನೀವು ನನ್ನ ಒಡೆದು ಹೋದ ಕಣ್ಣಿನ ಬಗ್ಗೆ ಸಂತಾಪ ಸೂಚಿಸುತ್ತಿರುವಿರಿ. ಆದರೆ ನನ್ನ ಸ್ವಸ್ಥ ಕಣ್ಣು ತನ್ನ ಸಹೋದರ ಕಣ್ಣು ಅನುಭವಿಸಿದುದನ್ನು ಇಚ್ಛಿಸುತ್ತಿದೆ. ನನ್ನ ಸಹೋದರಿಗೆ ಸಂಭವಿಸಿದುದು ತನಗೇಕೆ ಸಂಭವಿಸಿಲ್ಲ ಎಂದು ಮರುಗುತ್ತಿದೆ. ನನಗೆ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉದಾಹರಣೆ ಅನುಸರಿಸಲು ಸಾಕು. ಅವರು ಕಷ್ಟಪಡುತ್ತಾ ಇರುವಾಗ ನಾನೇಕೆ ಕಷ್ಟ ಪಡದಿರಬೇಕು? ನನಗೆ ಅಲ್ಲಾಹನ ಬೆಂಬಲ ಸಾಕು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಉಸ್ಮಾನ್ ಬಿನ್ ಮಝ್‌ಊನ್(ರ) ಹಾಗೆ ಉತ್ತರ ಹೇಳಿದುದರ ಕಾರಣವೇನೆಂದರೆ ಅವರು ಪವಿತ್ರ ಖುರ್‌ಆನ್ ಆಲಿಸಿದ್ದರು. ಇಸ್ಲಾಮಿನ ಉಪದೇಶಗಳನ್ನು ಆಲಿಸಿದ್ದರು. ಅವರು ಪವಿತ್ರ ಖುರ್‌ಆನ್ ಓದಿರುವುದರಿಂದ ಅವರ ದೃಷ್ಟಿಯಲ್ಲಿ ಪದ್ಯಗಳಿಗೆ ಏನೂ ಮಹತ್ವವಿರಲಿಲ್ಲ. ಕವಿ ಲಬೀದ್ ಮುಸ್ಲಿಮನಾದಾಗ ಹೀಗೆಯೇ ವರ್ತಿಸಿದರು. ಒಮ್ಮೆ ಹಝ್ರತ್ ಉಮರ್(ರ) ಒಬ್ಬ ಗವರ್ನರನೊಂದಿಗೆ ಹೇಳಿದರು: ನನಗೆ ಕೆಲವು ಪ್ರಸಿದ್ಧ ಕವಿಗಳ ಹೊಸ ರಚನೆ ಕಳುಹಿಸಿರಿ. ಲಬೀದರೊಂದಿಗೆ ಅದರ ಬಗ್ಗೆ ಆವಶ್ಯಪಟ್ಟಾಗ ಅವರು ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ಬರೆದು ಕಳುಹಿಸಿದರು.

ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹಝ್ರತ್ ಉಸ್ಮಾನರೊಂದಿಗೆ ಇದ್ದ ಪ್ರೀತಿಯ ಸಂಬಂಧ ಒಂದು ಘಟನೆಯಿಂದ ಸ್ಪಷ್ಟವಾಗುತ್ತದೆ. ಹೀಗೆ ವರದಿಯಾಗಿದೆ: ಹಝ್ರತ್ ಉಸ್ಮಾನ್ ಮೃತರಾದಾಗ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಚುಂಬಿಸಿದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿತ್ತು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪುತ್ರ ಇಬ್ರಾಹೀಮ್ ನಿಧನ ಹೊಂದಿದಾಗ ಮೃತಶರೀರದೊಂದಿಗೆ ಹೇಳಿದರು: **ಅಲ್‌ಹಿಖ್ ಬಿ ಸಲಫಿನಸ್ಸಾಲಿಹ್ ಉಸ್ಮಾನ್ ಬಿನ್ ಮಝ್‌ಊನ್.** ನಮ್ಮ ಸಾತ್ವಿಕ ಬಂಧು ಉಸ್ಮಾನ್ ಬಿನ್ ಮಝ್‌ಊನ್‌ರ ಸಹವಾಸಕ್ಕೆ ಹೋಗು.

ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್ ಮದೀನಕ್ಕೆ ಹಿಜ್ರತ್ ಹೋದ ಘಟನೆಯ ವಿವರ ಹೀಗಿದೆ: ಮುಹಮ್ಮದ್ ಬಿನ್ ಉಮರ್ ವಾಖಿದಿ ಹೇಳುತ್ತಾರೆ: ಆಲ್‌ಮಝ್‌ಊನ್ ಕುಟುಂಬದ ಪುರುಷರೂ ಮಹಿಳೆಯರೂ ಎಲ್ಲರೂ ಒಟ್ಟಾಗಿ ಹಿಜ್ರತ್ ಮಾಡಲು ಹೊರಟರು. ಅವರಲ್ಲಿ ಯಾರೂ ಮಕ್ಕದಲ್ಲಿ ಬಾಕಿಯಾಗಿ ಉಳಿಯಲಿಲ್ಲ. ಹಝ್ರತ್ ಉಮ್ಮು ಅಲಾ ಹೇಳುತ್ತಾರೆ: ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಮುಹಾಜಿರರು ಮದೀನಕ್ಕೆ ಆಗಮಿಸಿದಾಗ ಅವರು ತಮ್ಮ ಮನೆಗಳಲ್ಲಿ ವಾಸಿಸಲಿ ಎಂದು ಅನ್‌ಸಾರ್‌ಗಳು ಆಶಿಸಿ ಅದರ ಬಗ್ಗೆ ಚೀಟಿ ಎತ್ತಿದರು. ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್(ರ) ನಮ್ಮ ಪಾಲಿಗೆ ಲಭಿಸಿದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್ ಮತ್ತು ಹಝ್ರತ್ ಅಬೂ ಹೈಸಮ್ ಬಿನ್ ತೈಹಾನ್ ಜೊತೆಗೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು.

ಹಝ್ರತ್ ಉಸ್ಮಾನ್ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು ಎಲ್ಲಾ ಜನರಿಗಿಂತ ಹೆಚ್ಚು ಉತ್ಸಾಹದಿಂದ ಇಬಾದತ್ ಮಾಡುತ್ತಿದ್ದರು. ಅವರು ಹಗಲಿನಲ್ಲಿ ಉಪವಾಸ ಮಾಡಿ ರಾತ್ರಿ ಇಬಾದತ್ ಮಾಡುತ್ತಿದ್ದರು. ಅವರು ಆಶೆಗಳಿಂದ ದೂರ ಸರಿದಿರುತ್ತಿದ್ದರು. ಮಹಿಳೆಯರಿಂದ ದೂರವಿರಲು ಪ್ರಯತ್ನಿಸುತ್ತಿದ್ದರು. ಅವರು ಲೌಕಿಕ ಕಾರ್ಯಗಳನ್ನು ತ್ಯಜಿಸಲು ಮತ್ತು ತನ್ನನ್ನು ತಾನೇ ಆತ್ಮಾಹುತಿ ಮಾಡಲು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಅನುಮತಿ ಕೇಳಿದ್ದರು. ಆದರೆ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದರಿಂದ ಅವರನ್ನು ತಡೆದರು. ಇದು ಅಸದುಲ್ ಗಾಬ ಎಂಬ ಚರಿತ್ರೆಯ ಗ್ರಂಥದಲ್ಲಿ ಬರೆದಿರುವ ವಿಷಯವಾಗಿದೆ.

ಒಂದು ವರದಿ ಹೀಗಿದೆ: ಒಂದು ದಿನ ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್‌ರ ಪತ್ನಿ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತ್ನಿಯರ ಬಳಿಗೆ ಬಂದಾಗ ಆಕೆ ಕೊಳಕು ವಸ್ತ್ರ ಧರಿಸಿದ್ದಳು. ತಲೆಗೂದಲು ಬಾಚಿರಲಿಲ್ಲ. ಆಕೆಯೊಂದಿಗೆ ಕೇಳಲಾಯಿತು ನೀನು ಈ ರೀತಿ ಏಕೆ ಮಾಡಿಕೊಂಡಿರುವೆ. ನೀನು ನಿನ್ನನ್ನು ಸರಿಯಾಗಿ ಇರಿಸಿಕೊಳ್ಳು. ನಿನ್ನ ಪತಿಗಿಂತ ಹೆಚ್ಚು ಐಶ್ವರ್ಯವಂತರು ಖುರೈಶಿಗಳಲ್ಲಿ ಬೇರೆ ಯಾರೂ ಇಲ್ಲ. ಹಝ್ರತ್ ಉಸ್ಮಾನರ ಪತ್ನಿ ಹೇಳಿದರು: ಅವರಿಗೆ ನನ್ನ ಬಗ್ಗೆ ಲಕ್ಷ್ಯವಿಲ್ಲ. ಅವರು ಅಲ್ಲಾಹನ ಆರಾಧನೆ ಮಾಡುವುದರಲ್ಲಿ ಮಗ್ನರಾಗಿರುತ್ತಾರೆ. ನಮ್ಮ ಕಡೆಗೆ ಗಮನಿಸುವುದಿಲ್ಲ. ಅವರು ಹಗಲು ಉಪವಾಸ ಮಾಡುತ್ತಾರೆ ಎಂದು ಹೇಳಿದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಗಮಿಸಿದಾಗ ಪತ್ನಿಯರು ಈ ವಿಷಯ ತಿಳಿಸಿದರು. ಅವರು ಹಝ್ರತ್ ಉಸ್ಮಾನರನ್ನು ಭೇಟಿಯಾಗಿ ಹೇಳಿದರು: ಏನು, ನಿಮಗೆ ನಾನು ಮಾದರಿಯಾಗಿಲ್ಲವೇ? ಹಝ್ರತ್ ಉಸ್ಮಾನ್ ಹೇಳಿದರು: ನಿಮ್ಮ ಹಾಗೆ ವರ್ತಿಸಲು ನಾನು ಪ್ರಯತ್ನ ಮಾಡುತ್ತಾ ಇದ್ದೇನೆ. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀವು ಹಗಲು ಹೊತ್ತು

ಉಪವಾಸ ಮಾಡಿ ರಾತ್ರಿ ಆರಾಧನೆಯಲ್ಲಿ ನಿರತರಾಗುತ್ತಿರುವಿರಿ. ಹಝ್ರತ್ ಉಸ್ಮಾನ್ ಹೇಳಿದರು: ಹೌದು ನಾನು ಹಾಗೆಯೇ ಮಾಡುತ್ತಿದ್ದೇನೆ. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಹಾಗೆ ಮಾಡಬೇಡಿರಿ. ನಿಮ್ಮ ಕಣ್ಣುಗಳಿಗೆ ನಿಮ್ಮ ಮೇಲೆ ಹಕ್ಕಿದೆ. ನಿಮ್ಮ ಶರೀರಕ್ಕೂ ನಿಮ್ಮ ಮೇಲೆ ಹಕ್ಕಿದೆ. ನಿಮ್ಮ ಕುಟುಂಬದವರಿಗೆ ನಿಮ್ಮ ಮೇಲೆ ಹಕ್ಕಿದೆ. ನಿಮ್ಮ ಪತ್ನಿ ಮತ್ತು ಮಕ್ಕಳಿಗೂ ನಿಮ್ಮ ಮೇಲೆ ಹಕ್ಕುಗಳಿವೆ. ನೀವು ನಮಾಝ್ ನಿರ್ವಹಿಸಿರಿ. ನಿದ್ರಿಸುವುದೂ ಆವಶ್ಯಕವಾಗಿದೆ. ರಾತ್ರಿ ಎದ್ದು ನಫ್ಲ್ ನಮಾಝ್ ನಿರ್ವಹಿಸಬಹುದು. ಆದರೆ ನಿದ್ರಿಸುವುದು ಸಹ ಆವಶ್ಯಕವಾಗಿದೆ. ಉಪವಾಸ ಮಾಡಬಹುದು ಮತ್ತು ಉಪವಾಸ ಮಾಡದೆ ಇರಬಹುದು. ನಫ್ಲ್ ಉಪವಾಸ ಮಾಡಬಹುದು ಆದರೆ ಕೆಲವು ದಿವಸ ಉಪವಾಸ ಬಿಟ್ಟು ಬಿಡಬೇಕು ಎಂದು ಉಪದೇಶಿಸಿದರು. ಸ್ವಲ್ಪ ದಿವಸಗಳ ನಂತರ ಹಝ್ರತ್ ಉಸ್ಮಾನ್‌ರ ಪತ್ನಿ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತ್ನಿಯರ ಬಳಿಗೆ ಬಂದಾಗ ಆಕೆ ಮದುಮಗಳ ಹಾಗೆ ಸಿಂಗರಿಸಿ ಸುಗಂಧ ದ್ರವ್ಯ ಹಚ್ಚಿದ್ದಳು. ವಿಷಯವೇನೆಂದು ಕೇಳಿದಾಗ ಆಕೆ ಹೇಳಿದಳು: ಜನರಿಗೆ ಲಭಿಸುವುದು ನಮಗೆ ಸಹ ಲಭಿಸಲು ತೊಡಗಿದೆ. ಎಂದರೆ ಪತಿ ತನ್ನ ಬಗ್ಗೆ ಶ್ರದ್ಧೆವಹಿಸುತ್ತಿದ್ದಾರೆ.

ಹಝ್ರತ್ ಆಯಿಶ(ರ) ಇದರ ಬಗ್ಗೆ ಹೀಗೆ ಹೇಳುತ್ತಾರೆ: ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಸ್ಮಾನ್ ಬಿನ್ ಮಝ್‌ಊನ್‌ರನ್ನು ಕರೆಯಿಸಿ ಹೇಳಿದರು: ನೀವು ನನ್ನ ಮಾದರಿಯನ್ನು ಇಷ್ಟಪಡುವುದಿಲ್ಲವೇ? ಹಝ್ರತ್ ಉಸ್ಮಾನ್ ಹೇಳಿದರು: ನಾನು ತಮ್ಮ ರೀತಿಯನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದೇನೆ. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಾನು ನಿದ್ರಿಸುತ್ತೇನೆ ಮತ್ತು ನಮಾಝ್ ನಿರ್ವಹಿಸುತ್ತೇನೆ, ನಾನು ಉಪವಾಸ ಮಾಡುತ್ತೇನೆ. ಆದರೆ ಕೆಲವು ದಿನ ಉಪವಾಸ ಮಾಡುವುದಿಲ್ಲ. ನಾನು ಮಹಿಳೆಯರನ್ನು ವಿವಾಹವಾಗಿದ್ದೇನೆ. ಎಲೈ ಉಸ್ಮಾನ್, ನೀನು ಅಲ್ಲಾಹನಿಗೆ ಭಯಪಡು. ನಿನ್ನ ಮೇಲೆ ನಿನ್ನ ಪತ್ನಿಯ ಹಕ್ಕುಗಳಿವೆ. ಅತಿಥಿಗಳ ಹಕ್ಕುಗಳಿವೆ. ನಿನ್ನ ಸ್ವಂತ ಆತ್ಮದ ಹಕ್ಕುಗಳಿವೆ. ಆದುದರಿಂದ ಕೆಲವು ದಿವಸ ಉಪವಾಸ ಮಾಡು. ಕೆಲವು ದಿವಸ ಉಪವಾಸ ಮಾಡಬೇಡ. ನಮಾಝ್ ನಿರ್ವಹಿಸು. ನಿದ್ರಿಸು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್ ಅಜ್ಞಾನ ಕಾಲದಿಂದಲೇ ಮದ್ಯಪಾನ ತ್ಯಜಿಸಿದ್ದರು. ಇಸ್ಲಾಮ್‌ನಲ್ಲಿ ಲೌಕಿಕ ವ್ಯವಹಾರಗಳನ್ನು ಸಹ ತ್ಯಜಿಸಲು ಬಯಸಿದ್ದರು. ಆದರೆ ಇಸ್ಲಾಮಿನಲ್ಲಿ ಸನ್ಯಾಸವಿಲ್ಲವೆಂದು ಹೇಳುತ್ತಾ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರಿಗೆ ಅದರ ಅನುಮತಿ ನೀಡಿರಲಿಲ್ಲ.

ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್(ರ) ಮದೀನದಲ್ಲಿ ನಿಧನ ಹೊಂದಿದ ಪ್ರಥಮ ಮುಹಾಜಿರ್ ಆಗಿದ್ದರು. ಅವರು ಹಿಜರಿ ವರ್ಷ 2ರಲ್ಲಿ ನಿಧನ ಹೊಂದಿದರು. ಬೇರೆ ಕೆಲವು ವರದಿಗಳ ಪ್ರಕಾರ ಬದರ್ ಯುದ್ಧದ ನಂತರ ಇಪ್ಪತ್ತೆರಡು ತಿಂಗಳು ದಾಟಿದಾಗ ಅವರು ನಿಧನ ಹೊಂದಿದರು. ಜನ್ನತುಲ್ ಬಖೀಅ್‌ನಲ್ಲಿ ದಫನು ಗೊಳಿಸಲಾದ ಪ್ರಥಮ ಜನಾಝ ಅವರದಾಗಿತ್ತು. ಅವರ ಬಗ್ಗೆ ಇನ್ನೂ ಕೆಲವು ವಿಷಯಗಳಿವೆ. ಇನ್‌ಶಾ ಅಲ್ಲಾಹ್ ಮುಂದೆ ವಿವರಿಸುವೆನು.

——————*****——————


***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh London, UK. On 19-04-2019.*

**Summarized by** *Majlis Ansarullah Bharat*

***Kannada Translation***: M. Ubeidullah for Kannada Desk, Qadian

***Reviewed by***: M.P Ibrahim |***Typing***: U Basheer Ahmad

***Published By***: Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon